R No KKNN 12

11 - 2 - 1976

ಸ್ವಾಮಿ ಮಾಡೋತ್ಸವ ನಿರಂತರವಾಗಿರಲಿ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ
SATYAVADI

Golden Jubilee Celebrated Paper

Satyavadi Daily

Mysore 4

- For Influential Publicity -

ಸಂಪಾದಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯ ಪ್ರಕಾಶಕರು: ಎಸ್. ಪಿ. ಸಿ. ಸಿ. ಸದಸ್ಯ ಜಾರವಿರಂತ ಎಂ. ಎಸ್. ಕೃಷ್ಣ ಮುದ್ರಕರು

ಚುನಾವಣೆ ಸುಧಾರಣೆ ಅಗತ್ಯ

ಕುದುರೆ ಜೂಜು ನಿಲ್ಲಿಸಲಾಗುತ್ತೆ

ಮದರಾಸು— ತಮಿಳು ನಾಡುವಿನಲ್ಲಿ ಮಾರ್ಚ್ 31 ರ ಹೊತ್ತಿಗೆ ಕುದುರೆ ಜೂಜು ನಿಲ್ಲಿಸುವ ಸರಕಾರದ ನಿರ್ಧಾರದಲ್ಲಿ ಹಿಮ್ಮೆಟ್ಟುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಕರುಣಾನಿಧಿಯವರು ಪತ್ರಿಕೆಯವರಿಗೆ ತಿಳಿಸಿದರು.

●

ಸುಶ್ಮಾ ಸಲಹೆ

ಬೊಂಬಾಯಿ— ದೇಶವನ್ನು ಪೀಡಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ರಾಜಕೀಯ ಪಕ್ಷಗಳೂ ಅರ್ಥಶಾಸ್ತ್ರಜ್ಞರೂ ಶ್ರೀ ಜಯಪ್ರಕಾಶನಾರಾಯಣರ ಸಹಾಯದೊಡನೆ ರಾಷ್ಟ್ರೀಯಮನೋಭಾವ ಸೃಷ್ಟಿಸಲು ಕಾಂಗ್ರೆಸ್ ಎಂ. ಪಿ ಶ್ರೀ ಚಂದ್ರಶೇಖರ್ ಪತ್ರಿಕೋದ್ಯೋಗಿಗಳ ಸಂಘದಲ್ಲಿ ಮಾತನಾಡುತ್ತಾ ಸಲಹೆ ಮಾಡಿದರು.

★

ಲಂಕಾದಲ್ಲಿ ಹಶುವಿನಿಂದ ಸಾವು

ಕೊಲಂಬೊ — ಶ್ರೀ ಲಂಕಾದಲ್ಲಿ ಭಾರಿ ಪ್ರಮಾಣದ ತೋಟದ ಕೆಲಸಗಾರರು ಹೆಚ್ಚಾಗಿ ಹಶುವಿನಿಂದ ಸಾಯುತ್ತಿರುವರೆಂದು ವರದಿಯೊಂದು ವರದಿಗಳು ಬರುತ್ತಿವೆ

★

ಜನಸಂಘದ ವಿರೋಧ

ಬರೋಡ— ಕಾಶ್ಮೀರದಲ್ಲಿ ಷೇಕ್ ಅಬ್ದುಲ್ಲರವರು ವಜೀರ್-ಇ-ಅಜಾಂ ಅನ್ನು (ಆ ಪದವು ಪ್ರಧಾನಿ ಎಂಬುದರ ಉರ್ದು ಸಮಾನಾರ್ಥವುಳ್ಳದ್ದಾಗಿದೆ) ಪ್ರತಿಷ್ಠಿಸಲ್ಪಟ್ಟರೆ, ಜನಸಂಘವು ವಿರೋಧಿಸುವುದೆಂದು ಸಂಘದ ಅಧ್ಯಕ್ಷ ಶ್ರೀ ಎಲ್ ಕೆ ಅದ್ವಾನಿ ಹೇಳಿಕೆ ಹೊರಡಿಸಿರುವರು.

●

ಫಲಕಾರಿ ಆಗಲಿಲ್ಲ

ಬೆಂಗಳೂರಿನಲ್ಲಿ ಮಹಿಳಾ ಭೂರಕ್ಷಣ ಸಮಿತಿ ರಚಿಸಿಕೊಟ್ಟಿದ್ದ ಬೆಂಗಳೂರುಬಂದ್ ಫಲಕಾರಿ ಆಗಲಿಲ್ಲ.

ಮಂತ್ರಿಗಳಿಗೆ ಬೆದರಿಕೆ

ತಿರುಪತಿ — ಪಟ್ಟಣದಲ್ಲಿರುವ ಕುಡಿಯುವ ನೀರು ಸರಬರಾಜು ಉತ್ತಮಪಡಿಸಲು ನಡೆಯುತ್ತಿರುವ ತುರ್ತು ಕಾರ್ಯಗಳನ್ನು ನಿಲ್ಲಿಸುವಂತೆ-ಪೌರಾಡಳಿತಮಂತ್ರಿ ಶ್ರೀ ಜೆಲ್ಲ ಸುಬ್ಬರಾಯಡುರವರು ಆಜ್ಞೆ ಮಾಡಿರುವುದನ್ನು ಪ್ರತಿಭಟಿಸಿ, ಹಲವು ಪುರುಷರು ಮತ್ತು ಸ್ತ್ರೀಯರು ಅವರನ್ನು ಫೋರಾಟ ಮಾಡಿದರು ಈ ಆಜ್ಞೆ ರದ್ದು ಪಡಿಸದಿದ್ದರೆ ರೂ. 18 ವರೆ ಲಕ್ಷ ವೆಚ್ಚದಲ್ಲಿ ಕಟ್ಟಲಾಗಿರುವ ಪೌರಸಭೆ ಕಟ್ಟಡವನ್ನು ಅವರು 16 ನೇ ತಾ|| ಉದ್ಘಾಟಿಸಲು ಅವಕಾಶ ಕೊಡುವುದಿಲ್ಲವೆಂದು ಬೆದರಿಕೆ ಹಾಕಿರುವರು.

●

ರಾಜಘಡ ಕೋಟೆ ಆಕ್ರಮಣ ಸ್ಪರ್ಧೆ

ಪುಣೆಯ ವಿನಜರ ಗ್ರಾಮದ ಸುತ್ತ ಇರುವ ಸಹ್ಯಾದ್ರಿ ಬೆಟ್ಟ ಶ್ರೇಣಿ ಶಕ್ತಿ ರಾಜಘಡದ ಆಕ್ರಮಣ ಸ್ಪರ್ಧೆಯಲ್ಲಿ ಭಾಗವಹಿಸಿ 179 ನುಂದಿ ಹತ್ತುತ್ತಿದ್ದಾಗ ಛತ್ರಪತಿ ಶಿವಾಜಿ ಮಹಾರಾಜಾಕಿ ಜೈ ಘೋಷಣೆ ಆಗುತ್ತಿತ್ತು ಸ್ಪರ್ಧಿಗಳಲ್ಲಿ 8ರಾಜ್ಯಗಳವರು ಇರುವರು ಮಹಾರಾಷ್ಟ್ರ ಸರಕಾರದ ಆಶ್ರಯದಲ್ಲಿ ಈ ಸ್ಪರ್ಧೆ.

●

ಚುನಾವಣೆ ಸುಧಾರಣೆ ಅಗತ್ಯ

ದೇಶದಲ್ಲಿ ಪ್ರಜಾರಾಜ್ಯ ಉಳಿಯಬೇಕಾದರೆ ಚುನಾವಣೆ ಸುಧಾರಣೆ ಅವಶ್ಯಕವೆಂದು ಮಾಜಿ ಕೇಂದ್ರ ವಿದೇಶಾಂಗಮಂತ್ರಿ ಶ್ರೀ ಚಾಗ್ಲಾ ಬೊಂಬಾಯಿನಲ್ಲಿ ರೊಟರಿ ಸಂಸ್ಥೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

●

ಈಗ ಶ್ರೀ ಯೂನಿವರ್ಸಿಟಿ ಕೆಳಮಟ್ಟದವರೆಗೆ ಇರುವ ಉಚಿತ ವಿದ್ಯಾಭ್ಯಾಸವನ್ನು ಸ್ನಾತಕೋತ್ತರದ ವರೆಗೆ ತರಲು ತಮಿಳು ನಾಡು ಯೋಚಿಸಿದೆ.

ಕೊಲೆ ; ಆತ್ಮಹತ್ಯೆ

ನಿರುದ್ಯೋಗ, ಕಷ್ಟಕಾರ್ಪಣ್ಯದಿಂದ ಪೀಡಿತನಾದ ಪೀಡಿತನಾದ ಓರ್ವ ವಿದ್ಯಾವಂತ ಯುವಕನು ರಾಜಂದ ಗ್ರಾಮದ ಹತ್ತಿರದ ಅರಣ್ಯದಲ್ಲಿ ತನ್ನ ಹೆಂಡತಿಯನ್ನು ಕೊಂದು, ತಾನೂ ವಿಷ ಸೇವಿಸಿ ಸತ್ತನು. ಈ ದಂಪತಿಗಳು ಅಡವಿಯಲ್ಲಿ ಶೇಖರಿಸಿದ ಸೌದೆ ಮಾರಿ ಜೀವಿಸುತ್ತಿದ್ದರೆಂದು ಅಕೋಲ ವಾರ್ತೆ.

ಶೇಕಡ 51

ವಿಶ್ವದ ಜನಸಂಖ್ಯೆಯಲ್ಲಿ ಶೇಕಡ 30 ಇರುವ ಶ್ರೀಮಂತ ಬಂಡವಾಳಶಾಹಿ ರಾಷ್ಟ್ರಗಳೂ ಸಮಾಜವಾದಿ ದೇಶಗಳು ವಿಶ್ವ ಧಾನ್ಯ ಸರಬರಾಜಿನಲ್ಲಿ ಶೇಕಡ 51 ತಿಂದಿರುವದೆಂದು ಬೊಂಬಾಯಿ ವಾರ್ತೆ.

ಷೇಕ್ ಅಬ್ದುಲ್ಲರಿಗೆ ಅಧಿಕಾರ

ಷೇಕ್ ಅಬ್ದುಲ್ಲ ಹಾಗೂ ಕೇಂದ್ರಕ್ಕೆ ಆಗಿರುವ ಒಪ್ಪಂದದಂತೆ ಈ ತಿಂಗಳು 24 ರಂದೇ ಕಾಶ್ಮೀರ ಆಡಳಿತ ಅವರಿಗೆ ವಹಿಸಲ್ಪಡುವದಾಗಿ ಶ್ರೀನಗರ ವಾರ್ತೆ.

ಸಮಾಜವಾದ

ಸಮಾಜವಾದವು ಕೆಳಮಟ್ಟದ ಅಭಿವೃದ್ಧಿ ದೇಶಗಳಿಗಿಂತ ಅಭಿವೃದ್ಧಿಗೊಂಡಿರುವ ದೇಶಗಳಲ್ಲಿ ವ್ಯವಸ್ಥೆಗೊಳಿಸಲಾಗುವ ವಿಷಯವಾಗಿದೆ ಎಂದು ಖ್ಯಾತ ಅಮೇರಿಕಾ ಅರ್ಥಶಾಸ್ತ್ರಜ್ಞ ಪ್ರೊ. ಗಾಲ್‌ಬ್ರೈತ್ ಅಭಿಪ್ರಾಯಪಟ್ಟಿರುವರು ಎಂದು ಅಹಮದಾಬಾದು ವಾರ್ತೆ.

ವಿಧಾನ ಮಂಡಲ

ಬೆಂಗಳೂರಿನಲ್ಲಿ ನಿನ್ನೆ ವಿಧಾನಮಂಡಲದ ಅಧಿವೇಶನದಲ್ಲಿ ರಾಜ್ಯಪಾಲ ಶ್ರೀ ನೋಕನಆಲ ಮುಖಾದಿಯಾರವರು 36 00 ಪದಗಳ ತನ್ನ ಭಾಷಣ ಪ್ರಾರಂಭಿಸಿದೊಡನೆ ವಿರೋಧ ಪಕ್ಷದವರು 4 ನಿಮಿಷಗಳಲ್ಲೇ ಭಾರಿ ಕೂಗಾಟದಿಂದ ಓದಲು ಬಿಡಲಿಲ್ಲ – ಗೌರ್ನರರು ಭಾಷಣವನ್ನು ಓದುವದನ್ನು ನಿಲ್ಲಿಸಿ, ಅದು ಒದಲ್ಪಟ್ಟಿತೆಂದು ತಿಳಿದುಕೊಳ್ಳುವಂತೆ ಕೇಳಿದರು – ಬೆಂಗಳೂರಿನಲ್ಲಿ, ಮುಸಿಕೆಯರು, ವಿದ್ಯಾರ್ಥಿಗಳು, ಸರಕಾರಿ ನೌಕರರು ತಮ್ಮ ಕುಂಠು ಕೊರತೆಯನ್ನು ರಾಜ್ಯಾಂಗ ರೀತ್ಯ ಹೊರಪಡಿಸಲು ಯೋಜಿಸಿದ್ದಾಗ ನಗರದಲ್ಲಿ ಪ್ರತಿಬಂಧಕಾಜ್ಞೆ ವಿಧಿಸಿರುವದನ್ನು ವಿರೋಧಿಸಿ, ಸರಕಾರದ ನೀತಿಗೆ ಸ್ವತಂತ್ರ ಪಕ್ಷದ ಶ್ರೀ ಕೆ ಎಂ ಗಾಗಣ್ಣನವರು ಪ್ರತಿಭಟಿಸಿ ಗೌರ್ನರರು ಭಾಷಣ ಓದದೆ ಹೊರಟು ಹೋಗಬೇಕೆಂದು ಹೇಳಿದರು – ಕೆಲ ಪಕ್ಷದ ಸದಸ್ಯರು ವೇದಿಕೆ ಹತ್ತಿರ ಹೋಗಿ "ಗೌರ್ನರರೇ, ಹಿಂದಕ್ಕೆ ಹೋಗಿ" ಎಂದು ಕೂಗಿಕೊಂಡರು – ಕಮ್ಯೂನಿಸ್ಟ್ ಪಾರ್ಟಿಯ ಮೂರು ಸದಸ್ಯರು ಸಭೆಯನ್ನು ಬಹಿಷ್ಕರಿಸಿದರು.

ಜಗದ್ಗುರುಗಳವರ ನಿವಾಸದಲ್ಲಿ ಕಳುವು

ಶೃಂಗೇರಿ — ಜಗದ್ಗುರುಗಳವರ ನಿವಾಸದಲ್ಲಿ ಭಾನುವಾರ ಪ್ರಮುಖ ದಸ್ತಾವೇಜುಗಳ ಕಳುವಾಗಿದೆ – ಕಟ್ಟಡದ ಹತ್ತಿರ ಒಂದು ಶಾಲು ಮತ್ತು ಕೆಲವು ಕಾಗದದ ಚೂರುಗಳು ಬಿದ್ದಿದ್ದವು – ಹಣಕ್ಕಾಗಿ ಆಗಿರುವ ಕಳ್ಳತನವಲ್ಲ – ಪೋಲೀಸರ ತನಿಖೆ ನಡೆಯುತ್ತಿದೆ.

Rugs, Sweaters & Kashmir Coats

ರಗ್ಗು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

A Fair Price Shop in Actual Practice

ದ ಸ ರಾ

ಬೆಂಗಳೂರು– ಎಲ್ಲಾ ಆಡಂಬರ ವೈಭವಗಳಿಂದ ಕೂಡಿದ ದಸರಾವು ಈ ವರ್ಷ ಕ್ಟೋಬರ್‌ನಲ್ಲಿ ಆಚರಿಸಲಾಗುವುದೆಂದು ಪ್ರವಾಸ ಅಭಿವೃದ್ಧಿ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಮರಿಪುಟ್ಟಣ್ಣನವರು ಪತ್ರಿಕೆಯವರಿಗೆ ತಿಳಿಸಿದರು ದಕ್ಷಿಣ ರಾಜ್ಯಗಳು ಭಾಗವಹಿಸಲು ಒಪ್ಪಿರುವುದಾಗಿ ತಿಳಿಸಿದರು – ಹಂಪಿಯಲ್ಲಿ ಮಾರ್ಚಿ ನ ರಿಂದ 16 ರವರಿಗೆ ನಡೆಯುವ ವಿಜಯನಗರದ ಉತ್ಸವವು ವಾರ್ಷಿಕ ಉತ್ಸವ ವಾಗಲಿದೆ ಎಂದೂ ತಿಳಿಸಿದರು.

★

ಅದ್ಭುತ ಸಾಹಸ

ಶಿವಮೊಗ್ಗಾ — ಒಬ್ಬ ಗ್ರಾಮಸ್ಥ ಬಾಬ್ಯ ನಾಯಕ ಅಯನ್ನೂರು ಅಡವಿಗೆ ಶನಿವಾರ ಸಾಯಂ ತರಲು ಅರುಣೋದಯ ಕಾಲದಲ್ಲೇ ಹೋದನು ; ಆಗ ಅಲ್ಲಿ ಒಂದು ಹುಲಿ ಇವನ ಮೇಲೆ ಬಿದ್ದಿತು ; ಈತನು ತನ್ನ ದೊಣ್ಣೆಯಿಂದ ಅರ್ಧ ಗಂಟೆ ಕಾಲ ಅದನ್ನು ಎದುರಿಸುತ್ತಿದ್ದು ಕಡೆಗೆ ದೊಣ್ಣೆಯನ್ನು ಜೋರಾಗಿ ಬೀಸಿ ಅಷರ ಮೇಲೆ ಎಸೆಯಲು ಅದು ದಟ್ಟ ಅಡವಿಯೊಳಕ್ಕೆ ಹೊರಟುಹೋಯಿತು – ತೀವ್ರ ಗಾಯಗೊಂಡ ಬಾಬ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾನೆ.

★

ಸಾಹಿತ್ಯ ಪರಿಷತ್ತಿನ ಸ್ತುತ್ಯ ಕಾರ್ಯ

ಬೆಂಗಳೂರು— ಈ ಅಂತರ ರಾಷ್ಟ್ರೀಯ ಮಹಿಳಾ ವರ್ಷವನ್ನು ಕನ್ನಡ ಸಾಹಿತ್ಯ ಪರಿಷತ್ತು ಆಚರಿಸಲೂ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಲವು ಸ್ಪರ್ಧೆಗಳೂ ಮತ್ತು ವಸ್ತುಪ್ರದರ್ಶನಗಳೂ ಏರ್ಪಡಿಸಲ್ಪಡುವವೆಂದೂ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ. ನಾರಾಯಣರವರು ಪತ್ರಿಕೆಯವರಿಗೆ ತಿಳಿಸಿದರು

ವುಡ್‌ಲಾಂಡ್ಸ್ 7 2 75 ರಿಂದ

ಅಮೋಘ ಆರಂಭ

ದಿ ಚೀಟ್

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಪಾತ್ರ– ವಿನೋದ್ ಖನ್ನ ಮೌಸಮಿ ಚಟರ್ಜಿ ದಿನ ೫ ಪ್ರದರ್ಶನಗಳು

ಅಪೇರಾ 7 2 75 ರಿಂದ

ಭಕ್ತ ಮಾರ್ಕಂಡೇಯ

ಅಮೋಘ ಕನ್ನಡ ಚಿತ್ರ

ಪಾತ್ರ – ರಘುರಾಮಯ್ಯ ನರಸಿಂಹರಾಜು ದಿನ 3 ಪ್ರದರ್ಶನಗಳು

Contribute Liberally to the National Defence Fund

SHAKTI SUDHA

A Superb Tonic

Quality Printing Neat Binding

Lakshminarasimha Press

Sivarampet Mysore 1

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ



Protect the Cow

Help The Gorakshana

—Humanitarian Propoganda Monthly—

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore